ಎಂ.ವಿ.ಸಿ. 529/2024 ಪಿಡಬ್ಲ್ಯೂ 1 ಭಾಗ್ಯಮ್ಮ

ಸಾಕ್ಷಿಯನ್ನು ದಿನಾಂಕ 15.11.2024 ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲು:</u> 2 ನೇ ಎದುರುದಾರರ ಪರ ಶ್ರೀ ಡಿ.ಜಿ.ಎನ್. ವಕೀಲರಿಂದಃ**

ನಾನು ವಡಿಯಾಂಡಹಳ್ಳಿ ಗ್ರಾಮದವಳಿರುತ್ತೇನೆ. ನನಗೆ ಸರ್ಕಾರದಿಂದ ಆಧಾರ್ ಕಾರ್ಡ್ ಕೊಟ್ಟಿರುತ್ತಾರೆ. ಸಾಕ್ಷಿಯು ತನ್ನ ಆಧಾರ್ ಕಾರ್ಡ್ ಪ್ರತಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಆರ್. 1 ಎಂದು ಗುರುತಿಸಲಾಯಿತು. ಅಪಘಾತವಾದ ದಿನ ನಾನು ಊರ ಒಳಗಿನಿಂದ ನಮ್ಮ ಮನೆ ಇರುವ ಸೈಟ್ ಗೆ ನಡೆದುಕೊಂಡು ಹೋಗುತ್ತಿದ್ದೆ. ಆ ದಿನ ನಾನು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದೆ , ರಸ್ತೆಯನ್ನು ದಾಟುತ್ತಿರಲಿಲ್ಲ. ನಾನು ಬರುತ್ತಿದ್ದ ಸ್ಕೂಟರನ್ನು ನೋಡದೇ ರಸ್ತೆ ದಾಟಲು ಹೋಗಿ ಬಿದ್ದು ಗಾಯಪಡಿಸಿಕೊಂಡೆ ಎಂದರೆ ಸುಳ್ಳು. ಅಪಘಾತವಾದ ತಕ್ಷಣ ಅರಕೆರೆ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿಂದ ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ಇಟ್ಟುಕೊಳ್ಳಲಿಲ್ಲ, ನಂತರ ನಾನು ಮೈಸೂರಿನ ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆಯಲ್ಲಿ 9 ದಿನ ಒಳರೋಗಿಯಾಗಿ ಇದ್ದೆ, ಅದರಿಂದ ಒಂದು ಲಕ್ಷ ಚಿಕಿತ್ಸೆಗೆ ಖರ್ಚು ಆಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು. ನಾನು ಸಹಾಯಕರನ್ನು ನೇಮಕ ಮಾಡಿಕೊಂಡಿದ್ದೆ, ಅವರಿಗೆ ಪ್ರತಿದಿನ 500/-ರೂ ಕೊಡುತ್ತಿದ್ದೆ , ಪ್ರತಿಬಾರಿ ಹೊರರೋಗಿಯಾಗಿ ಹೋದಾಗ ಪ್ರತಿಬಾರಿ ಮೂರು ಸಾವಿರ ಖರ್ಚಾಗುತ್ತಿತ್ತು ಎಂದು ದಾಖಲೆ ಕೊಟ್ಟಿಲ್ಲ. ಮುಂದುವರೆದ ಚಿಕಿತ್ಸೆಗೆ 70,000/- ಖರ್ಚಾಗುತ್ತದೆ ಎಂದು ವೈದ್ಯರು ದಾಖಲೆ ಕೊಟ್ಟಿಲ್ಲ. ನಾನು ಹೈನುಗಾರಿಕೆ ಮಾಡುತ್ತಿದ್ದೆ, ಅದರಿಂದ ತಿಂಗಳಿಗೆ 23,000/- ಸಂಪಾದನೆ ಮಾಡುತ್ತಿದ್ದೆ ಎಂದು ದಾಖಲೆ ಕೊಟ್ಟಿಲ್ಲ. ನಾನು ಅಪಘಾತಕ್ಕಿಂತ ಮುಂಚೆ ಏನು ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೋ ಈಗಾಲೂ ಸಹ ಅದನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದೇನೆ ಎಂದರೆ ಸುಳ್ಳು. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳು ಕೇಸಿಗಾಗಿ ಸೃಷ್ಟಿಸಿ ಹಾಜರುಪಡಿಸಿದ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ ಮತ್ತು ಎಂಎಸಿಟಿ, ಶ್ರೀರಂಗಪಟ್ಟಣ